ಹುಬ್ಬಳ್ಳಿ - ಧಾರವಾಡದಲ್ಲಿ ಸಾಕ್ಷರತೆ ಕುರಿತು.

339(736) ಶ್ರೀ ಜಗದೀಶ ಶೆಟ್ಟರ (ಧಾರವಾಡ ಗ್ರಾಮೀಣ) ಮಾನ್ಯ ವಯಸ್ಕರ ಶಿಕ್ಷಣ ಮತ್ತು ಸಾರ್ವಜನಿಕ ಕೆಳಕಂಡ ಗ್ರಂಥಾಲಯಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಇರುವ ಅನಕ್ಷರಸ್ಥರ ಸಂಖ್ಯೆ ಎಷ್ಟು: (ಪುರುಷರ ಮತ್ತು ಮಹಿಳೆಯರ ಪ್ರತ್ಯೇಕ ವಿವರ ನೀಡುವುದು):

ಆ) ಇವರನ್ನು ಸಾಕ್ಷರಸ್ಥರನ್ನಾಗಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು:

ಇ) ಮಹಾನಗರದಲ್ಲಿ ಈ ಕಾರ್ಯಕ್ರಮಕ್ಕೆ ಮಂಜೂರಾದ ಹಣವೆಷ್ಟು: ಹಾಗೂ ಈವರೆಗೆ ಖರ್ಚು ಮಾಡಿರುವ ಹಣವೆಷ್ಟು?

ಅ) ಗುರುತಿಸಿರುವ ಅನಕ್ಷರಸ್ಥರ ಸಂಖ್ಯೆ:

ಪುರುಷರು	ಮಹಿಳೆಯರು	ಒಟ್ಟು
20,866	27,304	48,170

ಆ) ಇವರನ್ನು ಸಾಕ್ಷರಸ್ಥರನ್ನಾಗಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳು ಈ ಕೆಳಗಿನಂತಿದೆ. ಧಾರವಾಡ ಜಿಲ್ಲೆಯಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನ ಅನುಷ್ಠಾನಗೊಳಿಸಲಾಗಿದೆ. ಆಂದೋಲನದ ಅಂಗವಾಗಿ ಈ ಮಹಾನಗರದ ವ್ಯಾಪ್ತಿಯಲ್ಲಿ 450 ಬಾಳ ಬೆಳಕು ಕಲಿಕಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಈ ಕಲಿಕಾ ಕೇಂದ್ರಗಳ ಮಾರ್ಗದರ್ಶಿಗಳಿಗೆ ತರಭೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ನವಸಾಕ್ಷರರಲ್ಲಿ - ಮಕ್ಕಳ ದಾಖಲಾತಿ-ಹಾಜರಾತಿ ಬಗ್ಗೆ, ಉಳಿತಾಯದ ಬಗ್ಗೆ, ಗ್ರಂಥಾಲಯಗಳ ಬಗ್ಗೆ ಅರಿವನ್ನು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಾಂಸ್ಕೃತಿಕ ಹಾಗೂ ಧಾರ್ಮಿಕ ಚಟುವಟಿಕೆಗಳ ಅಂಗವಾಗಿ ಭಾಷಣ, ರಂಗೋಲಿ, ಹಾಡುಗಳ ಸ್ಪರ್ಧೆ, ಭಜನಾ ಸ್ಪರ್ಧೆ ಮುಂತಾದವುಗಳನ್ನು ಹಮ್ಮಿಕೊಳ್ಳಲಾಗಿದೆ. ಮಕ್ಕಳ ಕಲಾವನ್ನು ಏರ್ಪಡಿಸಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಿಂದ ಅಕ್ಷರಸ್ಥರಾದವರ ಸಂಖ್ಯೆ: ಪುರುಷರು - 2428, ಮಹಿಳೆಯರು -3287 ಒಟ್ಟು - 5715 ಮಂದಿ

ಇ) ದಿನಾಂಕ: 16.6.96ಕ್ಕೆ ಇದ್ದಂತೆ ವಿವರ:

ಮಂಜೂರಾದ ಹಣ	-	3,71,875.00 ರೂ.
ವೆಚ್ಚವಾದ ಹಣ	-	3,36,573.00 ರೂ.
ಉಳಿಕೆ ಹಣ	-	35,302. 00 ರೂ.

ಆರ್. ಕೃಷ್ಣಪ್ಪ ವಯಸ್ಕರ ಶಿಕ್ಷಣ ಮತ್ತು ಸಾರ್ವಜನಿಕ ಗ್ರಂಥಾಲಯಗಳ ರಾಜ್ಯ ಸಚಿವರು.